125 ವರ್ಷಗಳಾದರೂ ಮರೆಯದ ಚಿಕಾಗೊ ಭಾಷಣ

ಪ್ರೊ. ಕೆ.ಬಿ. ಪ್ರಭುಪ್ರಸಾದ್

ಪ್ರಪಂಚದಲ್ಲಿ ಎಷ್ಟೋ ಮಂದಿ ಮಹಾಮಹಿಮರು ಆಗಿ ಹೋದರು; ಅವರೊಂದಿಗೆ ಅವರ ಕಾರ್ಯಗಳೂ ಮಸುಕಾಗುವುವು. ಆದರೆ ೧೨೫ ವರ್ಷಗಳ ನಂತರವೂ ಮರೆಯಲಾಗದ ಭಾಷಣ ಸ್ವಾಮಿ ವಿವೇಕಾನಂದರದು. ಅವರ ಚಿಕಾಗೋ ಭಾಷಣದ ಮಹಿಮೆಯನ್ನು ಕುರಿತು ಬರೆದಿರುವ ಲೇಖಕರು ನಿವೃತ್ತ ಪ್ರಾಧ್ಯಾಪಕರು. ಉತ್ತಮ ವಿದ್ವಾಂಸರೂ, ಲೇಖಕರೂ, ಗೀತರಚನಕಾರರೂ ಆಗಿರುವ ಅವರು ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಭಕ್ತರು.

ಇತ್ತೀಚೆಗೆ ಸೆಪ್ಟೆಂಬರ್ ೧೧ನೇ ದಿನವನ್ನು ಸ್ವಾಮಿ ವಿವೇಕಾನಂದರು ಅಮೆರಿಕಾದ ಚಿಕಾಗೊದಲ್ಲಿ ನಡೆದ ವಿಶ್ವದ ಸರ್ವಧರ್ಮಗಳ ಪ್ರಪ್ರಥಮ ಸಮ್ಮೇಳನದಲ್ಲಿ ನೀಡಿದ ಭಾಷಣದ ೧೨೫ನೆ ವಾರ್ಷಿಕ ಸ್ಮರಣೆಯಾಗಿ ಲೋಕಾದ್ಯಂತ ಬಹು ಸಂಭ್ರಮದಿಂದ ಆಚರಿಸಲಾಯಿತು. ಸಾಮಾನ್ಯವಾಗಿ ಮಹಾಪುರುಷರ ಜಯಂತಿಯನ್ನು ಅವರ ಪುಣ್ಯಸ್ಮರಣೆಯಾಗಿ ಆಚರಿಸುವುದು ವಾಡಿಕೆ. ಆದರೆ ಒಂದು ಭಾಷಣದ, ಅದೂ ಕೇವಲ ಹತ್ತು ನಿಮಿಷ ಮಾತನಾಡಿದುದನ್ನು ಇಂದಿಗೂ ಮರೆಯದೆ, ಅದರ ೧೨೫ನೇ ವರ್ಷದ ಸಂಸ್ಮರಣೆಯಾಗಿ ಜಗತ್ತಿನ ಹಲವಾರು ಕಡೆ ಉತ್ಸಾಹದಿಂದ ಆಚರಿಸುತ್ತಿರುವುದು ಪರಮಾಶ್ಚರ್ಯಕರವಾದ ಸಂಗತಿ. ಪ್ರಾಯಶಃ ಇದೊಂದೇ ಭಾಷಣ ಇಂಥಾ ಹೆಗ್ಗಳಿಕೆಗೆ ಪಾತ್ರವಾಗಿರುವಂತಹದು. ಈ ಅತ್ಯಲ್ಪ ಅವಧಿಯ ಉಪನ್ಯಾಸವನ್ನು ಮಾಡಿದವರು ಅಂದು ಇನ್ನೂ ಹೆಸರು ಮಾಡಿರದ ಒಬ್ಬ ಭಾರತೀಯ ವ್ಯಕ್ತಿ. ಈ ಉಪನ್ಯಾಸವನ್ನು ಮಾಡಿದ ನಂತರ ಜಗತ್ಪ್ರಸಿದ್ಧರಾದರು. ಅವರು ಬೇರೆ ಯಾರೂ ಅಲ್ಲ. ಸರ್ವ ಧರ್ಮಸಮನ್ವಯಾಚಾರ್ಯರೂ ಅವತಾರ ವರಿಷ್ಠರೂ ಆದ ಶ್ರೀರಾಮಕೃಷ್ಣ ಪರಮಹಂಸರ ಪರಮ ಪ್ರಿಯಶಿಷ್ಯ ನರೇಂದ್ರನಾಥ ದತ್ತ, ಸ್ವಾಮಿ ವಿವೇಕಾನಂದರು ಎಂದು ಲೋಕ ತಿಳಿಯಿತು. ಅಂದಿನ ಅಮೆರಿಕಾದ ಪ್ರಮುಖ ಪತ್ರಿಕೆಗಳಲ್ಲೆಲ್ಲ ಸ್ವಾಮೀಜಿಯ ಭವ್ಯ ಭಾವಚಿತ್ರ ಮತ್ತು ಅವರ ಉಪನ್ಯಾಸದ ಬಗ್ಗೆ ಪ್ರಶಂಸೆಯೆ.

೧೮೯೩ನೇ ಸೆಪ್ಟೆಂಬರ್ ೧೧, ಸೋಮವಾರ ಬೆಳಿಗ್ಗೆ ೧೦ ಘಂಟೆಗೆ ಸರಿಯಾಗಿ ಜಗತ್ತಿನ ಎಲ್ಲ ಧರ್ಮಗಳ ಸಮ್ಮೇಳನ ಪ್ರಾರಂಭವಾಯಿತು. ಎಲ್ಲ ಧರ್ಮಗಳ ಅಧಿಕೃತ ಪ್ರತಿನಿಧಿಗಳು ವೇದಿಕೆಯ ಮೇಲೆ ಆಸೀನರಾಗಿದ್ದರು ಇವರೆಲ್ಲರ ನಡುವೆ, ಬಾಸ್ಟನ್ನಿನ ಹಾರ್ವರ್ಡ್ ಯೂನಿವರ್ಸಿಟಿಯ ಗ್ರೀಕ್ ಭಾಷಾ ಪ್ರೊಫೆಸರ್ ಡಾ. ರೈಟ್, ''ನಮ್ಮ ಎಲ್ಲ ವಿದ್ವಾಂಸ ಪ್ರಾಧ್ಯಾಪಕರನ್ನು ಒಟ್ಟುಗೂಡಿಸಿದರೂ ಅವರೆಲ್ಲರ ವಿದ್ವತ್ತಿಗಿಂತಲೂ ಹೆಚ್ಚು ವಿದ್ವತ್ ಇರುವ ಈ ವ್ಯಕ್ತಿಯನ್ನು ತಡವಾದರೂ ಈಗ ಸರ್ವಧರ್ಮ ಸಮ್ಮೇಳನದಲ್ಲಿ ಹಿಂದೂಧರ್ಮದ ಪ್ರತಿನಿಧಿಯಾಗಿ ಸೇರಿಸಿಕೊಳ್ಳಿ'' ಎಂದು ಸಮ್ಮೇಳನದ ಆಯ್ಕೆ ಸಮಿತಿಯ ಅಧ್ಯಕ್ಷ ಡಾ.ಬರೋಸ್‌ರಿಗೆ ಖಾಸಾ ಪತ್ರ ಬರೆದರು. ಹೀಗೆ ಸ್ವಾಮೀಜಿ ಮತ್ತೊಬ್ಬ ಹಿಂದೂಧರ್ಮದ ಪ್ರತಿನಿಧಿಯಾಗಿ ಆಯ್ಕೆಯಾದರು. ಸ್ವಾಮೀಜಿ ಚಿಕಾಗೋ ನಗರಕ್ಕೆ ಹೋದಾಗ ಅವರ ತೇಜಸ್ಸನ್ನು ಗುರುತಿಸಿ ಸರ್ವವಿಧದಲ್ಲಿ ಸಹಾಯ ಮಾಡಿದೆ, ಸಭಾಂಗಣಕ್ಕೆ ಕರೆದೊಯ್ದು, ಶ್ರೀಮಂತ ಜಾರ್ಜ್ ಹೇಲ್‌ರ ಪತ್ನಿ ಶ್ರೀಮತಿ ಎಲೆನ್ ಹೇಲ್‌ರನ್ನೂ ಇಲ್ಲಿ ಕೃತಜ್ಞತೆಯಿಂದ ನೆನೆಯಬೇಕು.



೧೭ ದಿನಗಳು ನಡೆದ ಈ ವೈಭವಪೂರ್ಣ ಸಮ್ಮೇಳನ ಮೊದಲು ಸುಮಾರು ನಾಲ್ಕು ಸಾವಿರ ಜನ ಕುಳಿತುಕೊಳ್ಳಲು ಅವ ಕಾಶವಿದ್ದ ''ಹಾಲ್ ಆಫ್ ಕೊಲಂಬಸ್'' ಸಭಾಭವನದಲ್ಲಿ. ಬರ ಬರುತ್ತ ಜನ ಹೆಚ್ಚಾದರೆಂದು ನಾಲ್ಕನೆ ದಿನ ಪಕ್ಕದ ''ಹಾಲ್ ಆಫ್ ವಾಷಿಂಗ್‌ಟನ್'' ಎಂಬ ಭವನದಲ್ಲಿ ನಡೆಯತೊಡಗಿತು. ಮಹಾ ಮಹಾಮೇಧಾವಿಗಳೂ, ವಿದ್ವಾಂಸರೂ, ತೀಕ್ಷ್ಣ ವಿಮರ್ಶನಾ ದೃಷ್ಟಿಯ ಪ್ರಾಜ್ಞರೂ ಆದ ಸಭಿಕರು ಕಿಕ್ಕಿರಿದಿದ್ದರು. ಸುಮಾರು ಏಳು ಸಾವಿರಕ್ಕೂ ಹೆಚ್ಚು. ಸ್ವಾಮೀಜಿಯಂತಹ ಧೀಮಂತ ಧೈರ್ಯಶಾಲಿಯೂ nervous ಆಗುವಂತೆ ಆಯಿತು. ಅಲ್ಲದೆ ಮೊದಮೊದಲು ಮಾತಾಡಿದವರ ವಾಗ್ವೈಖರಿಯೂ ಅದಕ್ಕೆ ಕಾರಣ. ತಮ್ಮ ಹೆಸರನ್ನು ಕೂಗಿದಾಗ ''ಈಗ ಬೇಡ, ಅನಂತರ, ಅನಂತರ ಮಾತನಾಡುತ್ತೇನೆ.'' ಎನ್ನುತ್ತಿದ್ದ ಸ್ವಾಮೀಜಿ ಕಡೆಗೆ ಮುಂದಕ್ಕೆ ಹಾಕುವುದು ಸಾಧ್ಯವಿಲ್ಲ ಎಂದಾಗ ಎದ್ದು ನಿಂತು, ಮನದೊಳಗೆ ಸರ್ವವಿದ್ಯಾದೇವಿ, ವಾಗ್ದೇವಿ, ತಾಯಿ ಸರಸ್ವತಿ ಯನ್ನು ಪ್ರಾರ್ಥಿಸಿ, ಗುರು ಮಹಾರಾಜರನ್ನು, ಶ್ರೀಶಾರದಾ ಮಾತೆ ಯವರನ್ನು ಸ್ಮರಿಸಿ, ''ಅಮೆರಿಕಾದ ಸೋದರಿ-ಸೋದರರೆ'' ಎಂದು ಮಾತನ್ನು ಶುರು ಮಾಡಿದಾಗ, ಇನ್ನೊಂದು ಶಬ್ದವನ್ನು ಉಚ್ಚರಿಸುವ ಮುನ್ನವೆ ಇಡೀ ಸಭೆಯಲ್ಲಿ ವಿದ್ಯುತ್‌ಸಂಚಾರ ವಾದಂತಾಗಿ, ನೆರೆದ ಎಲ್ಲ ಸ್ತ್ರೀ-ಪುರುಷರೂ ತಮಗರಿವಿಲ್ಲದಂತೆ ಎದ್ದು ನಿಂತು ಜೋರಾಗಿ ಮತ್ತೆ ಮತ್ತೆ ಚಪ್ಪಾಳೆ ತಟ್ಟತೊಡಗಿದರು. ಪೂರ್ತಿ ಎರಡು ನಿಮಿಷ ಕಾಲ ಚಪ್ಪಾಳೆಯ ಸದ್ದು ಮೊಳಗಿತು. ಸಾಮಾನ್ಯವಾಗಿ ಇಂಗ್ಲೀಷಿನಲ್ಲಿ, ''Ladies and Gentlemen'' (ಮಹಿಳೆಯರೆ ಮತ್ತು ಮಹಾನೀಯರೇ) ಎಂದು ಸಂಬೋಧಿ ಸುವುದು ವಾಡಿಕೆ. ಹಾಗೆ ಮಾಡದೆ, ''ಅಮೆರಿಕದ ಸೋದರಿ ಸೋದರರೇ'' ಎಂದು ಸಂಬೋಧಿಸಿದ್ದರು. ಅದು ಅವರ ಹೃದ ಯಾಳದಿಂದ ಸಹಜವಾಗಿ ಬಂದಿತ್ತು. ಪ್ರೀತಿಯಿಂದ ತುಂಬಿತ್ತು. ಹಾಗೆಂದೇ ಎಲ್ಲರ ಹೃದಯಗಳನ್ನೂ ಮುಟ್ಟಿತ್ತು. ವಿಶ್ವದ ಮಾನವ ರೆಲ್ಲ ಒಂದೇ ಕುಟುಂಬದವರು ಎಂದು ಹೇಳುವ, ಉಪನಿಷದ್ ವಾಣಿ ''ವಸುಧೈವ ಕುಟುಂಬಕಂ'' ಎಂಬ ಮಾತು, ಅತ್ಯಂತ ಸಹಜವಾಗಿ ಭಾವ ತುಂಬಿ ಹೊಮ್ಮಿತು. ಸಭಿಕರು ಅದ್ಭುತವಾಗಿ ಪ್ರತಿಸ್ಪಂದಿಸುವಂತೆ ಮಾಡಿತ್ತು.

ಸ್ವಾಮೀಜಿಯ ಕಂಚು ಕಂಠ ಮೊಳಗಿತು, ''ಜಗತ್ತಿನ ಅತ್ಯಂತ ಪ್ರಾಚೀನವಾದ ಸನ್ಯಾಸಿ ವೃಂದದ ಪರವಾಗಿ, ಜೈನ-ಬೌದ್ಧಧರ್ಮ ಗಳು ಶಾಖೆಗಳಾಗಿರುವ ಆ ಮಾತೃಧರ್ಮದ ಪರವಾಗಿ, ಪ್ರಪಂ ಚದ ಕಿರಿಯ ರಾಷ್ಟ್ರ ಅಮೆರಿಕಾದ ಜನತೆಗೆ ಇಂಥಾ ಪ್ರೀತಿಯ ಸ್ವಾಗತಕ್ಕಾಗಿ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಯಾವ ಧರ್ಮ ಉಳಿದೆಲ್ಲ ಧರ್ಮಗಳನ್ನೂ ಗೌರವಿಸಿ ಒಪ್ಪಿಕೊಳ್ಳುವಂತಹ ಸಹಿ ಷ್ಣುತೆಯನ್ನು ಸಾರಿತೊ, ಯಾವ ಧರ್ಮ ನುಡಿದಂತೆ ನಡೆಯು ವುದೇ ಶ್ರೇಷ್ಠ ಎಂಬ ಆಚರಣೆಗೆ ಒತ್ತುಕೊಟ್ಟಿತೊ ಆ ಧರ್ಮದ ಪರವಾಗಿ ಧನ್ಯವಾದಗಳನ್ನು ಅರ್ಪಿಸುತ್ತೇನೆ.'' ಹೀಗೆ ''ಹಿಂದೂ'' ಎಂಬ ಹೆಸರನ್ನೇ ಹೇಳದೆ ಆ ಧರ್ಮ ಎಂತಹ ಶ್ರೇಷ್ಠವಾದ ಜೀವನ ಶೈಲಿಯನ್ನು ಅನುಸರಿಸಿತು ಎಂದು ಸೂಚಿಸಿ, ''ಆ ಧರ್ಮದ ಪರವಾಗಿ ನಿಮ್ಮೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಎಲ್ಲರ ಭಕ್ತಿಯುತ ನಮಸ್ಕಾರಗಳೂ, ನದಿಗಳಂತೆ ಎಲ್ಲೆಲ್ಲಿಂದ ಹುಟ್ಟಿ ಹರಿಯಲಿ ಕಡೆಗೆ ಸಾಗರವನ್ನೆ ಸೇರುವಂತೆ, ನಾನಾ ನಾಮ, ರೂಪಗಳಲ್ಲಿ ಪೂಜಿಸಲ್ಪಡುವ ಏಕಮೇವಾದ್ವಿತೀಯವಾದ ಪರ ಮಾತ್ಮನ ಪಾದವನ್ನೇ ಸೇರುತ್ತವೆ...'' ಎಂದು ಹೇಳುತ್ತ ಸ್ವಾಮೀಜಿ ವಿಶ್ವಮಾನವ ಧರ್ಮದ ಲಕ್ಷಣಗಳನ್ನು ಮುಂದಿಟ್ಟರು.

ಎಲ್ಲ ಧರ್ಮಗಳೂ ಒಂದೇ ಪರಮಸತ್ಯದೆಡೆಗೆ ಕರೆದೊ ಯ್ಯುವ ವಿವಿಧ ಪಥಗಳು, ಎಷ್ಟು ಮತಗಳೋ ಅಷ್ಟು ಪಥಗಳು, ಎಂದು ತಾವೇ ಸ್ವತಃ ಒಂದೊಂದು ಧರ್ಮವನ್ನೂ ಸಾಧನೆ (ಪ್ರಯೋಗ) ಮಾಡಿ ವೈಜ್ಞಾನಿಕ ಜಗತ್ತಿಗೆ ತೋರಿಸಿದ, ಸರ್ವ ಧರ್ಮ ಸಮನ್ವಯದ ಸಂದೇಶವನ್ನು ನೀಡಿದ ಅವತಾರ ವರಿಷ್ಠ ರಾದ ಶ್ರೀರಾಮಕೃಷ್ಣ ಪರಮಹಂಸರ ಪರಮಶಿಷ್ಯರಲ್ಲವೇ, ನರೇಂದ್ರನಾಥ ದತ್ತ, ಸ್ವಾಮಿ ವಿವೇಕಾನಂದರೆಂದೇ ಪ್ರಸಿದ್ಧರಾದ ವರು? ಅದುವರೆಗೆ ಮಾತಾಡಿದ ಬೇರೆ ಬೇರೆ ಧರ್ಮಗಳ ಪ್ರತಿ ನಿಧಿಗಳು ತಮ್ಮ ತಮ್ಮ ಧರ್ಮವನ್ನೇ ಸರ್ವಶ್ರೇಷ್ಠವಾದ ಧರ್ಮ ಎಂದು ಬಹು ಚೆನ್ನಾಗಿ, ಮನವೊಪ್ಪುವಂತೆ ಪ್ರತಿಪಾದಿಸಿದ್ದರು.

ವಿಶ್ವಧರ್ಮ ಸಮ್ಮೇಳನದ ಏರ್ಪಾಟು ಮತ್ತು ಉದ್ದೇಶ ಹೊರನೋಟಕ್ಕೆ ''ವಿಶ್ವ ಭ್ರಾತೃತ್ವದ ನಿರ್ಮಾಣ'' ಎಂದು ಪ್ರಕಟ ವಾಗಿದ್ದರೂ, ಅದರ ಗುಪ್ತ ಉದ್ದೇಶ, ಜಗತ್ತಿನ ಎಲ್ಲ ಧರ್ಮ ಗಳಿಗಿಂತಲೂ ಕ್ರೈಸ್ತ ಧರ್ಮವೇ ಶ್ರೇಷ್ಠವೆಂಬುದನ್ನು ಸಿದ್ಧಮಾಡಿ ತೋರಿಸಲೆಂದೇ. ಕ್ರೈಸ್ತೇತರ ಅನಾಗರಿಕರನ್ನು ಪ್ರದರ್ಶನ ಮಾಡು ವುದೇ ಸಮ್ಮೇಳನವನ್ನು ಯೋಜಿಸಿದವರ ಉದ್ದೇಶವಾಗಿತ್ತು.

ಆದರೆ ಸ್ವಾಮೀಜಿಯವರ ಕಿರುಭಾಷಣ ಇದನ್ನು ಬುಡ ಮೇಲು ಮಾಡಿತ್ತು. ಹಿಂದಿನ ದಿನದವರೆಗೂ ಅನಾಮಧೇಯ ರಾಗಿದ್ದ ಸ್ವಾಮೀಜಿ, ಈ ಭಾಷಣದ ನಂತರ, ಇದ್ದಕ್ಕಿದ್ದಂತೆ ಲೋಕ ಪ್ರಸಿದ್ಧರಾಗಿದ್ದರು. ಅಮೆರಿಕಾದ ಪ್ರಮುಖ ಪತ್ರಿಕೆಗಳು ಮೇಲ್ಪುಟ ದಲ್ಲೇ ದೊಡ್ಡ ದೊಡ್ಡ ಅಕ್ಷರಗಳಲ್ಲಿ ಸ್ವಾಮೀಜಿಯವರ ಭಾಷಣ ವನ್ನು ಅವರ ಭಾವಚಿತ್ರವನ್ನೂ ಮುದ್ರಿಸಿ ಸ್ವಾಮೀಜಿಯನ್ನು ಅವರ ಭಾಷಣವನ್ನು ಹಾಡಿ ಹೊಗಳಿದ್ದವು.

ಸ್ವಾಮೀಜಿ ಅನೇಕ ಕಡೆ ಆಮಂತ್ರಿತರಾಗಿ ಹಿಂದೂಧರ್ಮ ಹಾಗೂ ಸಂಸ್ಕೃತಿಗಳ ಬಗ್ಗೆ ಮಾತನಾಡಿ ಅಮೆರಿಕನ್ನರಲ್ಲಿದ್ದ ತಪ್ಪು ತಿಳಿವಳಿಕೆಗಳನ್ನು ಹೋಗಲಾಡಿಸಿದರು. ಹಾಗೆಯೆ ಸ್ವಾಮೀಜಿ ಭಾರತದ ಹೀನ ಸ್ಥಿತಿಯನ್ನೂ, ದಟ್ಟದಾರಿದ್ರ್ಯ, ಅವಿದ್ಯೆ, ಅಜ್ಞಾನ ಗಳಿಂದಾಗಿರುವ ಜನಸಾಮಾನ್ಯರ ದುಸ್ಥಿತಿಯನ್ನೂ ಮನಕರಗು ವಂತೆ ಹೇಳಿ, ಭಾರತಕ್ಕೆ ಅಮೆರಿಕೆ ಕಳಿಸಬೇಕಾದುದು ಕ್ರೈಸ್ತಧರ್ಮ ಬೋಧಕರನ್ನಲ್ಲ, ಮಾನವೀಯ ಆರ್ಥಿಕ ಸಹಾಯವನ್ನು, ಎಂದು ತಿಳಿಸಿದರು. ಇಷ್ಟಾದರೂ ಎಂಥಾ ಬಡವರಲ್ಲೂ, ಅವಿದ್ಯಾವಂತ ರಲ್ಲೂ ಧಮನಿಧಮನಿಗಳಲ್ಲಿ ಹರಿಯುತ್ತಿರುವುದು ಆಧ್ಯಾತ್ಮಿ ಕತೆಯೆ, ಭಾರತದ ಜೀವಾಳವೆ ಅಧ್ಯಾತ್ಮ ಎಂದು ಒತ್ತಿ ಹೇಳಿದರು.

ಇಷ್ಟು ಹೊತ್ತಿಗಾಗಲೆ ''ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ'' ಎಂಬ ಧ್ಯೇಯವಾಕ್ಯ, ಧ್ಯಾನ-ತಪಸ್ಸು-ಸಾಧನೆಗಳನ್ನು ಬದಿಗಿರಿಸಿ (ಇಲ್ಲವೆ ಅಂತರಂಗದಲ್ಲಿರಿಸಿ) ಹಸಿದ ಹೊಟ್ಟೆಗೆ ನೀಡ ಬೇಕಾದುದು ವೇದಾಂತವಲ್ಲ, ಮೊದಲು ಅನ್ನ, ವಸ್ತ್ರಗಳು, ಎಂಬ ಮಾನವೀಯ ಅಂತಃಕರಣ ಸ್ವಾಮೀಜಿಯವರೊಳಗೆ ಆಗಲೆ ಮೂಡಿತ್ತು. ಧರ್ಮದ ಮೂಲ, ದಯೆ, ಅನುಕಂಪೆ, ಮಾನವೀಯತೆ. ಮಾನವೀಯತೆ ಎಂದರೆ ಇತರರ ಬಗ್ಗೆ, ಅವರ ನೋವಿನ ಬಗ್ಗೆ ಕಾಳಜಿ. ನಿಸ್ವಾರ್ಥವಾದ ಸೇವೆಯೆ ಅದರ ಮಂತ್ರ. ಉಪಕಾರವಲ್ಲ, ಸಹಾಯವಲ್ಲ, ಸೇವೆ. ತನ್ನೊಳಗಿನ ದಿವ್ಯತ್ವವನ್ನೆ ಎಲ್ಲರಲ್ಲೂ ಗುರುತಿಸುವುದು. ಕಾಣುವುದು ಮೊದಲು ಅದನ್ನು ತನ್ನೊಳಗೇ ಗುರುತಿಸಿಕೊಳ್ಳವುದು. ಇತರರಿಗಾಗಿ ಬದುಕುವುದು. ಮೈಸೂರು ಮಹಾರಾಜರಾಗಿದ್ದ ಚಾಮರಾಜ ಒಡೆಯರಿಗೆ ಬರೆದ ಪತ್ರವೊಂದರಲ್ಲಿ ''The alone live who live for others, the rest are more than dead.''

ಪ್ರತಿಯೊಬ್ಬರಿಗೂ ತಮ್ಮೊಳಗಿನ ದೈವತ್ವವನ್ನು ಅರಿವು ಮಾಡಿ ಕೊಡುವವರೆಗೂ, ನೊಂದವರ ಕಣ್ಣೀರನ್ನೊರೆಸುವರೆಗೂ ನಾನು ಮುಕ್ತನಾಗಬಯಸುವುದಿಲ್ಲ ಎಂದು ಘೋಷಿಸಿದರು. ವೇದಾಂ ತದ ಸಾರವನ್ನು ಅರಗಿಸಿಕೊಂಡವರೆಲ್ಲ ಘೋಷಿಸುವ ಮಾತು ಇದು. ಇದೇ ಉಪನಿಷದ್‌ಸಾರದಿಂದ ಸ್ಫೂರ್ತಿತರಾದ ಕವಿ ರವೀಂದ್ರನಾಥ ಠಾಕೂರರು ವೈಜ್ಞಾನಿಕ ಹಾಗೂ ವೈಚಾರಿಕ ಜಗ ತ್ತಿನ ಪರವಾಗಿ ಒಂದು ಪ್ರಾರ್ಥನೆಯನ್ನು ಗೀತಾಂಜಲಿಯಲ್ಲಿ ಸೇರಿಸಿದರು:

Where the mind is without fear
and the head is held high;
Where knowledge is free;
Where the World has not been broken up
into fragments
By narrow domestic walls;
Where Words come out from the depth of truth
Where tireless striving stretchess its arms toward
perfection,
Where the clear stream of reason has not lost
its way
Into the dreary desert sand of dead habit
Where the mind is led froward by thee
Into ever-widening thought and action
Into that heaven of freedom, my Father,
let my country awake.

(ಎಲ್ಲಿ ಮನಸ್ಸು ನಿರ್ಭಯವಾಗಿರುತ, ತಲೆಯೆತ್ತಿ ಬಾಳಬಹುದೊ;
ಎಲ್ಲಿ ಜ್ಞಾನಕ್ಕೆ ಯಾವ ನಿರ್ಬಂಧವೂ ಇರದೊ,
ಎಲ್ಲಿ ಸಂಕುಚಿತ ಗೋಡೆಗಳ ಒಳಗೆ ಸಿಕ್ಕಿಕೊಂಡು ಜಗತ್ತು ತುಂಡು
ತುಂಡಾಗಿರದೊ,
ಎಲ್ಲಿ ಸತ್ಯದಾಳದಿಂದ ಮಾತು ಹೊರಹೊಮ್ಮುವುದೊ;
ಎಲ್ಲಿ ಪರಿಪೂರ್ಣತೆಯೆಡೆಗೆ ತೋಳು ಚಾಚಲು ದಣಿವಿಲ್ಲದ
ಹೋರಾಟ ನಿರಂತರವಾಗಿ ನಡೆಯುತಿಹುದೊ,
ಎಲ್ಲಿ ನಿರ್ಮಲವಾದ ವಿಚಾರವಾಹಿನಿ ದಾರಿತಪ್ಪಿ ಜಡ್ಡುಗಟ್ಟಿದ
ಸಂಪ್ರದಾಯಗಳ ಒಣ ಮರುಧರೆಯ ಮರಳಿನಲಿ
ಇಂಗಿ ಹೋಗದೊ,
ಎಲ್ಲಿ ಮನಸ್ಸು ನಿತ್ಯವಿಸ್ತಾರವಾಗುತ್ತಲೇ ಇರುವ ಆಲೋಚನೆ
ಮತ್ತು ಕ್ರಿಯಾಶೀಲತೆಗಳ ಕಡೆ ಮುನ್ನಡೆಸಲ್ಪಡುವುದೊ;
ಅಂಥ ಸ್ವಾತಂತ್ರ್ಯದ ಸ್ವರ್ಗದೊಳಗೆ ಓ ತಂದೆಯೆ,
ನನ್ನ ದೇಶ ಕಣ್ತೆರೆಯಲಿ !)

ವಿಜ್ಞಾನಮಯ ಕೋಶದಿಂದ ಹುಟ್ಟಿದ ಈ ಪ್ರಾರ್ಥನೆ ಒಬ್ಬ ದ್ರಷ್ಟಾರ ಕವಿಯದಷ್ಟೇ ಅಲ್ಲ, ಇದು ಪ್ರತಿಯೊಂದು ರಾಷ್ಟ್ರದ ಪ್ರಾರ್ಥನೆ. ಸಮಸ್ತ ಮಾನವ ಕುಲದ ಪ್ರಾರ್ಥನೆ. ಧರ್ಮ ಎಂದರೆ ಜಾತಿ ಅಲ್ಲ, ಮತ ಅಲ್ಲ, ಅರ್ಥಹೀನವಾದ ಪೂಜೆ, ಶಾಸ್ತ್ರ ವಿಧಿ ಗಳಲ್ಲ. ಮೂಢನಂಬಿಕೆಗಳೂ ಅಲ್ಲ. ಮೇಲು-ಕೀಳು ಎಂಬ ವರ್ಣ ಗಳಲ್ಲ. ಎಲ್ಲರ ಒಳಿತನ್ನೇ ಬಯಸುವ ಪ್ರೀತಿ. ತಮ್ಮೊಳಗಿನ ಆತ್ಮ ಮತ್ತು ಅದರ ಅಮೃತತ್ವವೊಂದೇ ಪರಮ ಸತ್ಯ ಎಂಬ ಅರಿವು. ಮಾನವ ಸ್ವಾರ್ಥಿಯಾಗದೆ ವಿಶ್ವಮಾನವನಾಗ ಬೇಕು. ಎಲ್ಲ ರಾಷ್ಟ್ರ ಗಳೂ ಭಗವತ್ಕೃಪೆಯಿಂದ ಪರಿವರ್ತಿತವಾಗಿ ಕವಿ ರವೀಂದ್ರರ ಪ್ರಾರ್ಥನೆಯನ್ನೀಡೇರಿಸುವ ಹಾಗೆ ಎಚ್ಚರವಾಗಬೇಕು.

''ಏಳಿ, ಎದ್ದೇಳಿ, ನಿಲ್ಲದಿರಿ ಗುರಿ ಮುಟ್ಟುವ ತನಕ'' **(ಉತ್ತಿಷ್ಠತ, ಜಾಗ್ರತ, ಪ್ರಾಪ್ಯವರಾನ್ನಿಬೋಧತ)** ಎಂಬ ಸ್ವಾಮಿ ವಿವೇಕಾ ನಂದರ ಕರೆಗೆ ಓಗೊಟ್ಟಾಗ ಮಾತ್ರ ಅವರ ಚಿಕಾಗೋ ಭಾಷಣದ ೧೨೫ನೆ ವರ್ಷದ ಸಂಭ್ರಮದ ಆಚರಣೆ ಅರ್ಥಪೂರ್ಣವಾಗುತ್ತದೆ.